ನೋಂದಣಿ ಸಂಖ್ಯೆ : ಡಿ.ವೈ.ಆರ್. : 270
ದಿನಾಂಕ 16-09-1963

ಬ್ಯಾಂಕಿಂಗ್ ವ್ಯವಹಾರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ಸಂಖ್ಯೆ.
UBD KA 912P, ದಿನಾಂಕ 11-11-1987
ಆಡಳಿತ ಕಛೇರಿ ಸ್ಥಳಾಂತರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ಸಂಖ್ಯೆ
UBD BG BL AO 394, ದಿನಾಂಕ 22-06-2000

**TGMC BANK**

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ, ಬಿ.ಹೆಚ್. ರಸ್ತೆ, ತುಮಕೂರು - 572 103
ದೂರವಾಣಿ : 0816-4021102, 4021103

# ಚುನಾವಣಾ ನೋಟೀಸ್

**ದಿನಾಂಕ 12-01-2025ನೇ ಭಾನುವಾರ**

**ಸಮಯ : ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ**

**ಸ್ಥಳ : ಚೇತನ ವಿದ್ಯಾ ಮಂದಿರ, ಬಟವಾಡಿ, ಬಿ.ಹೆಚ್. ರಸ್ತೆ, ತುಮಕೂರು - 572 103**

ಅಂಚೆ ಪ್ರಮಾಣ ಪತ್ರ ಪಡೆದಿದೆ

ತೆರೆದ-ಅಂಚೆ

ಶ್ರೀಮತಿ/ಶ್ರೀ

_______________________

_______________________

_______________________

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ, ಬಿ.ಹೆಚ್. ರಸ್ತೆ, ತುಮಕೂರು -572 103**

## ಚುನಾವಣಾ ನೋಟೀಸ್

**ಮಾನ್ಯರೇ,**

**ನಮ್ಮ ಬ್ಯಾಂಕಿನ ಚುನಾವಣಾ ದಿನಾಂಕದಿಂದ 5 ವರ್ಷಗಳ ಅವಧಿಗೆ ಆಡಳಿತ ಮಂಡಳಿ ಸದಸ್ಯರ ಆಯ್ಕೆಗಾಗಿ ದಿನಾಂಕ 12-01-2025ನೇ ಭಾನುವಾರ ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ ಚೇತನ ವಿದ್ಯಾಮಂದಿರ, ಬಟವಾಡಿ, ಬಿ.ಹೆಚ್. ರಸ್ತೆ, ತುಮಕೂರು ಇಲ್ಲಿ ಚುನಾವಣೆ ನಡೆಸಲು ಏರ್ಪಡಿಸಲಾಗಿದೆ. ಮಾನ್ಯ ಅರ್ಹ ಸದಸ್ಯರೆಲ್ಲರೂ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿ ಮತದಾನ ಮಾಡಲು ಕೋರಲಾಗಿದೆ.**

**ರಿಟರ್ನಿಂಗ್ ಅಧಿಕಾರಿಗಳ ಚುನಾವಣಾ ವೇಳಾಪಟ್ಟಿಯನ್ನು ಸದಸ್ಯರುಗಳಿಗೆ ತಿಳುವಳಿಕೆಗಾಗಿ ಈ ಆಹ್ವಾನ ಪತ್ರಿಕೆಗೆ ಲಗತ್ತಿಸಿದೆ.**

**ದಿನಾಂಕ : 24-12-2024**

**ಸ್ಥಳ : ತುಮಕೂರು**

**ಸುರೇಶ್ ಜೆ**

**ಮುಖ್ಯ ಕಾರ್ಯನಿರ್ವಾಹಕರು**

## ವಿಶೇಷ ಸೂಚನೆ :

1. **ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 20(2) ಎ - iv ಮತ್ತು ಎ - v ರ ಪ್ರಕಾರ ಬ್ಯಾಂಕಿನ ಸದಸ್ಯನು ಹಿಂದಿನ 5 ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಯಾವುದೇ 2 ಸಾಮಾನ್ಯ ಸಭೆಗಳಿಗೆ ಹಾಜರಾಗದಿದ್ದಲ್ಲಿ ಮತ್ತು ಯಾವುದೇ 2 ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿ ವರ್ಷ ಬಳಸಿಕೊಳ್ಳಲು ತಪ್ಪಿದಲ್ಲಿ, ಅಂತಹ ಸದಸ್ಯನು ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಹಾಗೂ ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.**
2. **ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 20(2)( ಎ - iii ) ಅನ್ವಯ ಚುನಾವಣೆ ದಿನಾಂಕಕ್ಕೆ 365 ದಿವಸಗಳ ಒಳಗಿನ ಅವಧಿಯಲ್ಲಿ ಸದಸ್ಯತ್ವ ಪಡೆದ ಸದಸ್ಯರು ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತು ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.**

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ, ಬಿ.ಹೆಚ್. ರಸ್ತೆ, ತುಮಕೂರು -572 103

## ಚುನಾವಣಾ ನೋಟೀಸ್

ಮಾನ್ಯರೇ,

ಸಹಕಾರ ಸಂಘಗಳ ಜಂಟಿ ನಿಬಂಧಕರು (ಚುನಾವಣೆ) ಹಾಗೂ ಚುನಾವಣಾಧಿಕಾರಿಗಳು, ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರ ರವರ ಆದೇಶ ಸಂ. ಸ.ಚು.ಪ್ರಾ/ಜಂ.ನಿ/ದಾ.ಜಿ/ಆಮಂಚು - ರಿಆನೇ/09/2024-25 ದಿನಾಂಕ 05-10-2024 ರಂತೆ ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಬಿ.ಹೆಚ್. ರಸ್ತೆ, ತುಮಕೂರು ಇದರ ದಿನಾಂಕ 12-01-2025 ರಿಂದ ಮುಂದಿನ ಐದು ವರ್ಷಗಳ ಅವಧಿಗೆ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರುಗಳ ಆಯ್ಕೆಗಾಗಿ ಚುನಾವಣೆಯನ್ನು ನಡೆಸಲು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 13ಇ ಅಡಿಯಲ್ಲಿ ಮತ್ತು ಬ್ಯಾಂಕಿನ ಉಪವಿಧಿಗಳ ಪ್ರಕಾರ ಚುನಾವಣಾ ವೇಳಾಪಟ್ಟಿಯನ್ನು ಈ ಮೂಲಕ ಪ್ರಕಟಿಸಲಾಗಿದೆ.

ಚುನಾವಣೆ ನಡೆಯುವ ದಿನಾಂಕ : 12-01-2025

ಮತದಾನದ ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-00 ಗಂಟೆಯವರೆಗೆ

ಸ್ಥಳ : ಚೇತನ ವಿದ್ಯಾ ಮಂದಿರ, ಬಟವಾಡಿ, ಬಿ.ಹೆಚ್. ರಸ್ತೆ, ತುಮಕೂರು - 572 103

## ಸದರಿ ವೇಳಾಪಟ್ಟಿಯಂತೆ ಚುನಾವಣೆ ನಡೆಸಲಾಗುವುದು

| ಕ್ರಮ ಸಂಖ್ಯೆ | ವಿವರಗಳು | ದಿನಾಂಕ ಮತ್ತು ವೇಳೆ | ಸ್ಥಳ ಮತ್ತು ವಿವರಣೆ |
|---|---|---|---|
| ಎ) | ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | ದಿನಾಂಕ 29-12-2024 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 03.00 ಗಂಟೆಯವರೆಗೆ | ರಿಟರ್ನಿಂಗ್ ಅಧಿಕಾರಿಯವರಿಗೆ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| ಬಿ) | ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಕೊನೆಯ ದಿನಾಂಕ (ನಿಯಮ 14-ಎ) | ದಿನಾಂಕ 04-01-2025 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 03.00 ಗಂಟೆಯವರೆಗೆ | ರಿಟರ್ನಿಂಗ್ ಅಧಿಕಾರಿಯವರಿಗೆ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| ಸಿ) | ನಾಮಪತ್ರಗಳ ಪರಿಶೀಲನೆ (ನಿಯಮ 14-ಬಿ) | ದಿನಾಂಕ 05-01-2025 ಬೆಳಿಗ್ಗೆ 11.00 ಗಂಟೆಗೆ | ರಿಟರ್ನಿಂಗ್ ಅಧಿಕಾರಿಯವರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |

| | | | |
|---|---|---|---|
| ಡಿ) | ಸಿಂಧುತ್ವ ಹೊಂದಿರುವ ನಾಮ ನಿರ್ದೇಶಿತ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ - 14-ಬಿ (4)) | ದಿನಾಂಕ 05-01-2025 ನಾಮಪತ್ರಗಳ ಪರಿಶೀಲನೆ ನಂತರ | ರಿಟರ್ನಿಂಗ್ ಅಧಿಕಾರಿಯವರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| ಇ) | ಉಮೇದುವಾರರಿಂದ ನಾಮಪತ್ರವನ್ನು ಹಿಂಪಡೆಯಲು ಕಡೆಯ ದಿನಾಂಕ (ನಿಮಯ 14-ಸಿ) | ದಿನಾಂಕ 06-01-2025 ಮಧ್ಯಾಹ್ನ 3.00 ಗಂಟೆಯೊಳಗೆ | ರಿಟರ್ನಿಂಗ್ ಅಧಿಕಾರಿಯವರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| ಎಫ್) | ಸಿಂಧುತ್ವ ಹೊಂದಿರುವ ಉಮೇದುವಾರರ ಪಟ್ಟಿಯ ಪ್ರಕಟಣೆ (ನಿಮಯ 14-ಡಿ) | ದಿನಾಂಕ 06-01-2025 ಮಧ್ಯಾಹ್ನ 3.00 ಗಂಟೆಯ ನಂತರ | ರಿಟರ್ನಿಂಗ್ ಅಧಿಕಾರಿಯವರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| ಜಿ) | ಅವಶ್ಯಕವಿದ್ದಲ್ಲಿ ರಿಟರ್ನಿಂಗ್ ಅಧಿಕಾರಿಯವರಿಂದ ಅಭ್ಯರ್ಥಿಗಳಿಗೆ ಚಿಹ್ನೆಗಳ ಹಂಚಿಕೆ (ನಿಯಮ 14 - ಇ) | ದಿನಾಂಕ 06-01-2025 ಮಧ್ಯಾಹ್ನ 3.00 ಗಂಟೆಯ ನಂತರ | ರಿಟರ್ನಿಂಗ್ ಅಧಿಕಾರಿಯವರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| ಹೆಚ್) | ಸಿಂಧುತ್ವ ಹೊಂದಿರುವ ಉಮೇದುವಾರರ ಪಟ್ಟಿ ಚಿಹ್ನೆಯೊಂದಿಗೆ ಪ್ರಕಟಣೆ (ನಿಯಮ 14 - ಡಿ ಮತ್ತು 14- ಇ) (ಮಾದರಿ ಮತಪತ್ರ) | ದಿನಾಂಕ 08-01-2025 ಮಧ್ಯಾಹ್ನ 3.00 ಗಂಟೆಯ ನಂತರ | ರಿಟರ್ನಿಂಗ್ ಅಧಿಕಾರಿಯವರಿಂದ ಬ್ಯಾಂಕಿನ ಆಡಳಿತ ಕಛೇರಿ ಸೂಚನಾ ಫಲಕದಲ್ಲಿ |
| ಐ) | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ 12-01-2025 ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ | ಚೇತನ ವಿದ್ಯಾಮಂದಿರ, ಬಟವಾಡಿ, ಬಿ.ಹೆಚ್. ರಸ್ತೆ, ತುಮಕೂರು. |
| ಜೆ) | ಮತ ಎಣಿಕೆಯ ದಿನಾಂಕ ಮತ್ತು ಸಮಯ | ದಿನಾಂಕ 12-01-2025 ಮತದಾನದ ಸಮಯ ಮುಗಿದ ನಂತರ | ಚೇತನ ವಿದ್ಯಾಮಂದಿರ, ಬಟವಾಡಿ, ಬಿ.ಹೆಚ್. ರಸ್ತೆ, ತುಮಕೂರು. |
| ಕೆ) | ರಿಟರ್ನಿಂಗ್ ಅಧಿಕಾರಿಯವರಿಂದ ಫಲಿತಾಂಶ ಘೋಷಣೆ | ದಿನಾಂಕ 12-01-2025 ರಂದು ಮತ ಎಣಿಕೆ ಮುಗಿದ ನಂತರ | ಚೇತನ ವಿದ್ಯಾಮಂದಿರ, ಬಟವಾಡಿ, ಬಿ.ಹೆಚ್. ರಸ್ತೆ, ತುಮಕೂರು. |

## ವಿಶೇಷ ಸೂಚನೆಗಳು

1. ಬ್ಯಾಂಕಿನ ಬೈಲಾಸಂಖ್ಯೆ 46.1 ರ ಪ್ರಕಾರ ಆಡಳಿತ ಮಂಡಳಿಯ 19 ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆಯಲಿದ್ದು ಈ ಪೈಕಿ 1 ಸ್ಥಾನ ಪರಿಶಿಷ್ಟ ಜಾತಿ, 1 ಸ್ಥಾನ ಪರಿಶಿಷ್ಟ ಪಂಗಡ, 1 ಸ್ಥಾನ ಹಿಂದುಳಿದ ವರ್ಗದ 'ಎ', 1 ಸ್ಥಾನ ಹಿಂದುಳಿದ ವರ್ಗದ 'ಬಿ' ಮತ್ತು 2 ಸ್ಥಾನ ಮಹಿಳೆಯರಿಗೆ ಮೀಸಲಾಗಿರುತ್ತದೆ.

2. ಮೀಸಲು ಸ್ಥಾನಕ್ಕೆ ಸ್ಪರ್ಧಿಸುವ ಉಮೇದುವಾರರು ಉಮೇದುವಾರಿಕೆ / ನಾಮಪತ್ರದಲ್ಲಿ ಮೀಸಲು ಸ್ಥಾನದ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಮೀಸಲು ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ನಾಮಪತ್ರದೊಂದಿಗೆ ಸಲ್ಲಿಸತಕ್ಕದ್ದು.

3. ಕರ್ನಾಟಕ ಸಹಕಾರ ಸಂಘಗಳ ನಿಯಮ 14ಎ ರೀತ್ಯಾ ಉಮೇದುವಾರರು ಯಾವುದಾದರೂ ಒಂದು ಸ್ಥಾನಕ್ಕೆ ಮಾತ್ರ ಸ್ಪರ್ಧಿಸಬಹುದು ಹಾಗೂ ನಾಮಪತ್ರಕ್ಕೆ ಅಂತಿಮ ಅರ್ಹ ಮತದಾರರ ಪಟ್ಟಿಯಲ್ಲಿರುವ ಒಬ್ಬ ಸದಸ್ಯ ಒಬ್ಬ ಉಮೇದುವಾರರಿಗೆ ಮಾತ್ರ ಸೂಚಿಸತಕ್ಕದ್ದು. (ಸೂಚಕರಾಗಿ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳು ಸೂಚಿಸತಕ್ಕದ್ದಲ್ಲ)

4. ನಾಮಪತ್ರವನ್ನು ಸಲ್ಲಿಸುವಾಗ ಚುನಾವಣಾ ಠೇವಣಿ ಬಾಬ್ತು ರೂ. 2000.00 ಗಳನ್ನು ಬ್ಯಾಂಕಿಗೆ ನಗದಾಗಿ ಪಾವತಿಸಿ ರಸೀತಿ ಪಡೆಯತಕ್ಕದ್ದು. ಮೀಸಲು ಸ್ಥಾನಗಳಿಗೆ ಸ್ಪರ್ಧಿಸುವ ಸದಸ್ಯರಿಗೆ ಶೇ. 50 ರಷ್ಟು ವಿನಾಯಿತಿ ಇರುತ್ತದೆ.

5. ಕರ್ನಾಟಕ ಸಹಕಾರ ಸಂಘಗಳ ನಿಮಯ 14ಎಇ ರೀತ್ಯಾ ಹಾಗು ನಿಯಮ 14ಎಇ(4) ರೀತ್ಯಾ ಸ್ಪರ್ಧಿಸಿದ ಅಭ್ಯರ್ಥಿಯು ಚುನಾಯಿತನಾಗದಿದ್ದರೆ, ಚುನಾವಣೆಯಲ್ಲಿ ಎಲ್ಲಾ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯನ್ನು ಚುನಾಯಿಸಬೇಕಾದ ಸದಸ್ಯರ ಸಂಖ್ಯೆಯಿಂದ ಭಾಗಿಸಿದಾಗ ಬರುವಷ್ಟರ ಸಂಖ್ಯೆಯು ಆರನೇ ಒಂದರಷ್ಟು ಮತಗಳನ್ನು ಪಡೆಯದಿದ್ದಲ್ಲಿ ಹಾಗೂ ಮೀಸಲು ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯ ಹತ್ತನೇ ಒಂದಕ್ಕಿಂತ ಕಡಿಮೆ ಇದ್ದಲ್ಲಿ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

6. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಪ್ರಕರಣ ಮತ್ತು ನಿಯಮ ಹಾಗೂ ಬೈಲಾ ಪ್ರಕಾದ ನಿರ್ದೇಶಕ ಮಂಡಳಿಗೆ ಆಯ್ಕೆಯಾಗಲು ಇರಬೇಕಾದ ಅರ್ಹತೆ/ಅನರ್ಹತೆಗಳು ಈ ಕೆಳಕಂಡಂತೆ ಇರುತ್ತದೆ.

   ಅ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 16 ಮತ್ತು 17 ರನ್ವಯ ಅನರ್ಹರಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಆದೇಶವಾಗಿದ್ದಲ್ಲಿ.

   ಆ. ಸಹಕಾರ ಬ್ಯಾಂಕಿನಿಂದ ಸಾಲ ಪಡೆದು ಸುಸ್ತಿದಾರರಾಗಿರಕೂಡದು.

   ಇ. ಸಹಕಾರ ಕಾಯ್ದೆ ಕಲಂ 29ಸಿ ಅನ್ವಯ ಈ ಅವಧಿಯಲ್ಲಿ ಅನರ್ಹತೆ ಹೊಂದಿರತಕ್ಕದ್ದಲ್ಲ.

7. ನಾಮಪತ್ರದ ನಮೂನೆಗಳನ್ನು ಬ್ಯಾಂಕಿನ ವೇಳೆಯಲ್ಲಿ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಪಡೆಯತಕ್ಕದ್ದು.

8. ಉಮೇದುವಾರಿಕೆ ಸಲ್ಲಿಸಲು ಹಾಗೂ ವಾಪಸ್ಸಾತಿಗೆ ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ಖುದ್ದು ಅಭ್ಯರ್ಥಿ ನೀಡತಕ್ಕದ್ದು.

9. ನಾಮಪತ್ರಗಳ ಪರಿಶೀಲನೆ ವೇಳೆ ಅಭ್ಯರ್ಥಿಗಳು ಅಥವಾ ಸೂಚಕರು ಹಾಜರಿರಬಹುದು.

10. ರಾಷ್ಟ್ರ ಹಾಗೂ ರಾಜ್ಯ ರಾಜಕೀಯ ಚಿಹ್ನೆ ಹೊರತುಪಡಿಸಿ ಮುಕ್ತ ಚುನಾವಣಾ ಚಿಹ್ನೆಗಳನ್ನು ಬ್ಯಾಂಕಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಅಂತಿಮವಾಗಿ ಚಿಹ್ನೆಗಳನ್ನು ನೀಡುವ ಅಧಿಕಾರವು ರಿಟರ್ನಿಂಗ್ ಅಧಿಕಾರಿಯವರದ್ದಾಗಿರುತ್ತದೆ.

11. ಅಂತಿಮ / ಅರ್ಹ ಮತದಾರರ ಪಟ್ಟಿಯನ್ನು ಮುಖ್ಯ ಕಾರ್ಯನಿರ್ವಾಹಕರಿಂದ ಬ್ಯಾಂಕಿನವರು ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸಿ ಸದಸ್ಯರು ಪಡೆಯಬಹುದಾಗಿದೆ.

12. ಮತ ಚಲಾಯಿಸುವ ಅರ್ಹ ಸದಸ್ಯರು ಬ್ಯಾಂಕಿನಿಂದ ಪಡೆದ ಭಾವಚಿತ್ರವಿರುವ ಗುರುತಿನ ಕಾರ್ಡ್‌ನ್ನು ಮತದಾನ ನಡೆಯುವ ಸ್ಥಳದಲ್ಲಿ ಹಾಜರುಪಡಿಸಬೇಕು. ಬ್ಯಾಂಕಿನ ಗುರುತಿನ ಚೀಟಿ ಕಡ್ಡಾಯಗೊಳಿಸಿರುವುದರಿಂದ ಅರ್ಹ ಸದಸ್ಯರು ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಪಡೆದು ಮತದಾನ ಮಾಡುವುದು ಅವರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ.

13. ಆಯ್ಕೆಯಾಗಬೇಕಾದ ಅಭ್ಯರ್ಥಿಗಳಿಗಿಂತ ಹೆಚ್ಚಿನ ಅಭ್ಯರ್ಥಿಗಳು ಸ್ಪರ್ಧಿಸಿದ್ದಲ್ಲಿ ವೇಳಾಪಟ್ಟಿಯಂತೆ ಚುನಾವಣೆ ಜರುಗುವುದು.

14. ಚುನಾವಣೆ ಸಂಬಂಧವಾಗಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ಮುಗಿಯುವವರೆಗೂ ಸಾರ್ವಜನಿಕ ರಜೆ ದಿನಗಳಲ್ಲೂ ಸಹ ಚುನಾವಣೆ ವೇಳಾಪಟ್ಟಿಯಂತೆ ಕಾರ್ಯಕ್ರಮಗಳು ನಡೆಯುತ್ತವೆ.

ಸ್ಥಳ : ತುಮಕೂರು

ದಿನಾಂಕ : 24-12-2024

(ಕೆ.ಎಸ್. ಹರೀಶ್‌ಕುಮಾರ್)

ರಿಟರ್ನಿಂಗ್ ಅಧಿಕಾರಿ

ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟೀವ್ ಬ್ಯಾಂಕ್ ಲಿ.,

ಮತ್ತು

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತಿಪಟೂರು ಉಪ ವಿಭಾಗ,

ತಿಪಟೂರು, ತುಮಕೂರು ಜಿಲ್ಲೆ.